**Academic Calendar 2025 -26**

**( Month – wise distribution of course content)**

**Subject : Kannada** **STD : $X^{th}$**

| Sr. No | Month & Year | Unit No. / Chapter No. / Topic No. | Name of the unit/ Chapter/ Sub- Topic |
|---|---|---|---|
| 1 | April 2025 | 1 ( Poem) | ಕನ್ನಡ ನುಡಿ |
| 2 | April 2025 | 2 (Prose) | ನಿಯತ್ತಿನ ಮೌಲ್ಯ |
| 3 | April 2025 | 3 (Prose) | ಬ್ಯಾಂಕು |
| 4 | June 2025 | 4 (Poem) | ಹೆಮ್ಮೆ ನನಗೆ ಅಮ್ಮ |
| 5 | June 2025 | 5( Prose) | ಜೋಗ ಜಲಪಾತ |
| 6 | June 2025 | 6(Prose) | ಅತ್ತೆ ಮನೆಗಳಿಗೆ ಬಂದ |
| 7 | July 2025 | 7( Poem) | ಮಾವಿನ ಗೊಲ್ಲೆ |
| 8 | July 2025 | 8(Prose) | ಸರದಾರ ವಲ್ಲಭಭಾಯಿ ಪಟೇಲ್ |
| 9 | July 2025 | 9 (Prose) | ಅಡಗಿಸಿಟ್ಟ ಚಿನ್ನ |
| 10 | July 2025 | 10 (Poem) | ಈ ಮಣ್ಣು ನಮ್ಮದು |
| 11 | Aug 2025 | 11 (Prose) | ರೇಷ್ಮೆ ಸಾಕಾಣಿಕೆ |
| 12 | Aug 2025 | 12 ( Prose) | ದೇವಾನಾಂ ಪ್ರಿಯ |
| 13 | Aug 2025 | 13 (Poem) | ಕಲ್ಲು ಸಕ್ಕರೆ |
| 14 | Sep 2025 | 14 ( Prose) | ಹಂಪೆ |
| 15 | Sep 2025 | 15(Prose) | ಶಿವರಾಮ ಕಾರಂತರು |
| 16 | Sep 2025 | 16( Poem) | ನನ್ನ ದೇಹದ ಬೂದಿ |
| 17 | Oct 2025 | 17(Prose) | ಪರಮವಿರ ಚಕ್ರ: ನಮ್ಮ ಮಹಾ ಸಾಹಸಿಗಳು |
| 18 | Oct 2025 | 18( Poem) | ಬಿದಿರು ನಾನಾರಿಗಲ್ಲದವಳು |
| 19 | Nov 2025 | 19 (Prose) | ಸೌರ ಕೊಡೆ |
| 20 | Dec 2025 | 20( Prose) | ಜನಸಂಖ್ಯಾ ಸ್ಫೋಟ |
| 21 | Dec 2025 | 21( Poem) | ಸುಗ್ಗಿ |

# Mapping Process

Mapping of Learning Outcomes to the chapters from the Grade 10 Textbook for R3 Kannada Language.

| Chapter | Curricular Goals | Competencies | Learning Outcomes | Pedagogy & Revised blooms level |
|---|---|---|---|---|
| 1. ಕನ್ನಡ ನುಡಿ | C.G - 4 | **C-4-1** | L O - 2.<br>L O - 6 | 1, 2 |
| 2. ನಿಯತ್ತಿನ ಮೌಲ್ಯ | C.G - 3 | C-3-1 | L O – 3.<br>L O – 14 | 2 , 3 |
| 3. ಬಾಥಿಕ್ | C.G – 1 | C-1-1. C-1-2 | L O -1. | 2, 3 |
| 4. ಹೆಮ್ಮೆನನಗೆ ಅಮ್ಮ | C.G – 3 | C-3-1 | L O – 6 | 1, 2 |
| 5. ಜೋಗ ಜಲಪಾತ | C.G – 2 | C-2-1. C-2-2.C-2-3. C-2-4 | L O - 3. | 2, 4 |
| 6. ಅತ್ತೆಮನೆಗೆ ಅಳಿಯ ಬಂದ | C.G – 4 | C-4-1 | L O – 6 | 1, 2 |
| 7. ಮಾವಿನ ಗೊಲ್ಲೆ | C.G – 5 | C-5-1. C-5-2. C-5-3 | L O – 2. | 2, 6 |
| 8 .ಸರದಾರ ವಲ್ಲಭಭಾಯಿ ಪಟೇಲ್ | C.G – 1 | C-1-1. C-1-2 | L O - 8. | 2, 4 |
| 9. ಅಡಗಿಸಿಟ್ಟಚಿನ್ನ | C.G – 2 | C-2-1. C-2-2. C-2-3. C-2-4 | L O - 5. | 1, 2 |
| 10. ಈ ಮಣ್ಣುನಮ್ಮದು | C.G – 3 | C-3-1 | L O – 6 | 1, 3 |
| 11. ರೇಷ್ಮೆಸಾಕಾಣಿಕೆ | C.G – 1 | C-1-1. C-1-2 | L O - 12. | 2, 4 |
| 12. ದೇವಾನಾಂಪ್ರಿಯ | C.G – 3 | C-3-1 | L O - 1. | 2, 5 |
| 13. ಕಲ್ಲುಸಕ್ಕರೆ | C.G – 5 | C-5-1. C-5-2. C-5-3 | L O - 5. | 1, 2 |
| 14.ಹಂಪೆ | C.G – 4 | C-4-1 | L O - 10. | 1, 2 |
| 15. ಶಿವರಾಮ ಕಾರಂತರು | C.G – 3 | C-3-1 | L .O - 2 | 2, 6 |
| 16. ನನ್ನದೇಹದ ಬೂದಿ | C.G – 5 | C-5-1. C-5-2 | L O - 3. | 1, 2 |
| 17. ಪರಮ ವೀರ ಚಕ್ರ | C.G – 1 | C-1-1. C-1-2 | L O - 5. | 3, 4 |
| 18. ಬಿದಿರು ನಾನಾರಿಗಲ್ಲದವಳು | C.G – 3 | C-3-1. | L O - 8.<br>L O - 12 | 1, 2 |
| 19. ಸೌರ ಕೊಡೆ | C.G – 5 | C-5-1. C-5-2. C-5-3. | L O - 6.<br>L O - 7 | 2, 4 |
| 20. ಜನಸಂಖ್ಯಾಸ್ಫೋಟ | C.G – 2 | C-2-1. C-2-2. C-2-3 | L O - 5.<br>L O - 11 | 2, 6 |

| | | | | |
|---|---|---|---|---|
| 21. ಸುಗ್ಗಿ | C.G – 5 | C-5-1. C-5-2. C-5-3 | L O - 6.<br>L O - 12 | 1, 2 |

# INTERNAL ASSESSMENT RUBRICS

**STD : X** **SUB: KANNADA (R 3)**

**ಆಲಿಸುವಿಕೆಯ ಕೌಶಲ್ಯಗಳು ( Listening Skills)**

| Criteria | Needs Improvement<br>0.5 | Satisfactory<br>1.0 | Good<br>1.5 | Excellent<br>02 | |
|---|---|---|---|---|---|
| ಕೇಂದ್ರೀಕರಿಸುವ ಸಾಮರ್ಥ್ಯ | ಲಕ್ಷ್ಯ ಕೇಂದ್ರೀಕರಿಸುವಲ್ಲಿ ಕೊರತೆ (ವ್ಯತ್ಯಯ) | ಸ್ವಲ್ಪ ಮಟ್ಟಿಗೆ ಲಕ್ಷ್ಯ ಕೇಂದ್ರೀಕರಿಸುವ ಸಾಮರ್ಥ್ಯ | ಬಹುತೇಕ ಲಕ್ಷಪೂರ್ವಕ ಆಲಿಸುವಿಕೆ | ಪೂರ್ಣ ಲಕ್ಷ್ಯ ಕೇಂದ್ರೀಕರಿಸುವ ಸಾಮರ್ಥ್ಯ | |
| ತಿಳುವಳಿಕೆ | ತಿಳುವಳಿಕೆಯ ಕೊರತೆ | ಸ್ವಲ್ಪ ಮಟ್ಟಿಗೆ ತಿಳುವಳಿಕೆ | ಸಮಾಧಾನಕಾರಕ ತಿಳುವಳಿಕೆ | ಪರಿಪೂರ್ಣ ತಿಳುವಳಿಕೆ | |
| ಗಮನವಿಟ್ಟು ಕೇಳುವ ಸಾಮರ್ಥ್ಯ | ಏಕಾಗ್ರತೆಯ ಅಭಾವ | ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳುವ ಸಾಮರ್ಥ್ಯ | ಕೇಳುವ ಸಾಮರ್ಥ್ಯ ಸಮಾಧಾನ ಕಾರಕ | ಪೂರ್ಣ ಗಮನವಿಟ್ಟು ಕೇಳುವ ಸಾಮರ್ಥ್ಯ | |
| ಪ್ರತಿಕ್ರಿಯೆಯಲ್ಲಿ ನಿಖರತೆ | ಪ್ರತಿಕ್ರಿಯೆಯಲ್ಲಿ ಬಹಳ ಕೊರತೆ | ಸ್ವಲ್ಪ ಮಟ್ಟಿಗೆ ಪ್ರತಿಕ್ರಿಯೆ ತೋರಿಸುವದು | ಆಗಾಗ ಸರಿಯಾದ ಪ್ರತಿಕ್ರಿಯೆ | ಪ್ರತಿ ಬಾರಿಯೂ ನಿಖರ ಪ್ರತಿಕ್ರಿಯೆ | |
| ಪ್ರಮುಖ ಅಂಶಗಳನ್ನು ಸಂಕ್ಷಿಪ್ತಗೊಳಿಸುವ ಸಾಮರ್ಥ್ಯ | ಸಂಪೂರ್ಣ ಕೊರತೆ | ಸ್ವಲ್ಪ ಮಟ್ಟಿಗೆ ಪ್ರಮುಖ ಅಂಶಗಳ ಅರ್ಥಮಾಡಿಕೊಳ್ಳುವ ಅನುಚಿತ | ಕೆಲವೊಂದು ಅಂಶಗಳನ್ನು ಸಂಕ್ಷಿಪ್ತಗೊಳಿಸುವುದು | ಎಲ್ಲಾ ಪ್ರಮುಖ ಅಂಶಗಳನ್ನು ತಿಳಿದುಕೊಳ್ಳುವ, ಸಂಕ್ಷಿಪ್ತ ಮಾಡುವ ಸಾಮರ್ಥ್ಯ | |

**ಸೂಚನೆ:** ವಿದ್ಯಾರ್ಥಿಗಳಿಂದ ಪಡೆದ ಉತ್ತರ ಯಾವ ಮಟ್ಟದಲ್ಲಿದೆ ಎನ್ನುವುದನ್ನು ಶಿಕ್ಷಕರು ದೃಢಪಡಿಸಿ ಅಂಕಗಳನ್ನು ನೀಡುವುದು.

| ಮಾತುಗಾರಿಕೆಯ ಕೌಶಲ್ಯಗಳು ( Speaking Skills) | | | | | |
|---|---|---|---|---|---|
| **Criteria** | **Needs Improvement**<br>**0.5** | **Satisfactory**<br>**1.0** | **Good**<br>**1.5** | **Excellent**<br>**02** | |
| ನಿರಾರ್ಗಳತೆ ಅಸ್ಪಷ್ಟತೆ | ನಿರರ್ಗಳವಾಗಿ ಮಾತನಾಡಲು ಅಡೆತಡೆ | ಕೆಲವೊಂದು ಶಬ್ದಗಳು ಉಚ್ಛರಿಸು ವಲ್ಲಿ ತೊಂದರೆ | ಸಾಮಾನ್ಯ ಮಟ್ಟದಲ್ಲಿ ವಿಚಾರಗಳ ಮಂಡನೆ | ನಿರರ್ಗಳವಾಗಿ ವಿಚಾರ ಮಾಡುವುದು | |
| ವಿಷಯ ಸಂಘಟನೆ | ವಿಷಯ ಸಂಗ್ರಹ ಸಾಮರ್ಥ್ಯ ಸ್ವಲ್ಪಮಟ್ಟಿಗೆ ಅಭಿವೃದ್ಧಿ | ಕೆಲವೊಮ್ಮೆ ವಿಷಯ ಸಂಗ್ರಹಣೆ ಸಮರ್ಪಕವಾಗಿದ್ದು ಭಾಗಶಃ ಪ್ರಗತಿ | ವಿಷಯ ಚೆನ್ನಾಗಿದ್ದರೂ, ಸಂಗ್ರಹಣಾ ಸಾಮರ್ಥ್ಯ ಸುಧಾರಿಸಬೇಕು | ಪ್ರಗತಿಶೀಲ ವಿಷಯ ಸಂಗ್ರಹಣೆ | |
| ಉಚ್ಚಾರಣ ಸಾಮರ್ಥ್ಯ | ಅಸ್ಪಷ್ಟ ಉಚ್ಚಾರಣೆ ಮತ್ತು ಅರ್ಥ ಮಾಡಿಕೊಳ್ಳಲು ಕಠಿಣ | ಸ್ಪಷ್ಟವಾಗಿ ಉಚ್ಚರಿಸುವಲ್ಲಿ ಅಡೆತಡೆ | ಸಣ್ಣ ದೋಷಗಳೊಂದಿಗೆ ಸಾಮಾನ್ಯವಾಗಿ ಉಚ್ಚಾರಣೆ | ನಿರರ್ಗಳ, ಸ್ಪಷ್ಟ ಉಚ್ಚಾರಣೆ | |
| ಭಾಷೆಯಲ್ಲಿ ಸೃಜನಶೀಲತೆ | ಕಡಿಮೆ ಮಾತುಗಾರಿಕೆಯಿಂದ ಅಸ್ಪಷ್ಟತೆ | ಶಬ್ದ/ ವಾಕ್ಯ ರಚನೆಯಲ್ಲಿ ಬಹಳಷ್ಟು ದೋಷಗಳು | ಕೆಲವೊಂದು ದೋಷಗಳೊಂದಿಗೆ ಶಬ್ದ/ ವಾಕ್ಯ ರಚನೆಯಲ್ಲಿ ಅಡೆತಡೆ | ಅತ್ಯುತ್ತಮ ಶೇಣಿಯ ಶಬ್ದಗಳ ಸ್ಪಷ್ಟ ಬಳಕೆ | |
| ಮಾತನಾಡುವಾಗ ಆತ್ಮವಿಶ್ವಾಸ | ನಿಖರವಾಗಿ ಮಾತನಾಡಲು ಆತ್ಮ ವಿಶ್ವಾಸದ ಕೊರತೆ | ಹೆಚ್ಚಿನ ಸಮಯದಲ್ಲಿ ಆತ್ಮವಿಶ್ವಾಸದ ಕೊರತೆ | ಉತ್ತಮ ಆತ್ಮವಿಶ್ವಾಸದಿಂದ ಸಮತೋಲಿತ ಪ್ರದರ್ಶನ | ಅತ್ಯುತ್ತಮ ಆತ್ಮವಿಶ್ವಾಸದಿಂದ ಸಮತೋಲಿತವಾಗಿ ಪ್ರದರ್ಶನ | |

# ಓದುಗಾರಿಕೆಯ ಕೌಶಲ್ಯಗಳು (READING SKILLS)

| Criteria | Needs Improvement<br>0.5 | Satisfactory<br>1.0 | Good<br>1.5 | Excellent<br>02 | |
|---|---|---|---|---|---|
| ಉಚ್ಚಾರ | ಉಚ್ಚಾರಣೆಯಲ್ಲಿ ಆಸ್ಪಷ್ಟತೆ | ಉಚ್ಚಾರಣೆಯಲ್ಲಿ ಸ್ವಲ್ಪಶಬ್ದಗಳ ಆಸ್ಪಷ್ಟತೆ | ಶಬ್ದಗಳ ವಿಚಾರಣೆಯಲ್ಲಿ ಸ್ವಲ್ಪ ಸ್ಪಷ್ಟತೆ ಇರುವುದು | ಶಬ್ದಗಳ ವಿಚಾರಣೆಯಲ್ಲಿ ಸ್ಪಷ್ಟತೆ ಇರುವುದು | |
| ನಿರ್ಗಳತೆ (2) | ಓದಿನಲ್ಲಿ ಅಡೆತಡೆ | ಓದುವಾಗ ಕೆಲವು ಶಬ್ದಗಳಲ್ಲಿ ಅಡೆತಡೆ | ನಿರ್ಗಳವಾಗಿ ಓದುವುದು | ನಿರ್ಗಳವಾಗಿ ಸುಂದರವಾಗಿ ಓದುವುದು | |
| ಅಭಿವ್ಯಕ್ತಿ (2) | ಓದುವಾಗ ಹಾವಭಾವದಲ್ಲಿ ಹಿಂಜರಿಕೆ | ಓದುವಾಗ ಸ್ವಲ್ಪ ಹಾವಭಾವದಲ್ಲಿ ಏರಳಿತ | ಹಾವಭಾವ ಸರಿಯಾಗಿ ವ್ಯಕ್ತಪಡಿಸುವುದು | ಅಭಿವ್ಯಕ್ತಿಯಿಂದ ಓದುವುದು | |
| ಸಮಯ ಪ್ರಜ್ಞೆ (2) | ನಿರ್ದಿಷ್ಟ ಸಮಯದಲ್ಲಿ ಓದಿ ಮುಗಿಸಿದಿರುವುದು | ನಿರ್ದಿಷ್ಟ ಸಮಯಕ್ಕಿಂತ ಹೆಚ್ಚು ವೇಳೆ ತೆಗೆದುಕೊಳ್ಳುವುದು | ನಿರ್ದಿಷ್ಟ ಪಡಿಸಿದ ವೇಳೆಯಲ್ಲಿ ಓದಿ ಮುಗಿಸಲು ಪ್ರಯತ್ನಿಸುವುದು | ಸರಿಯಾಗಿ ಓದಿ ಮುಗಿಸಿವದು | |
| ಧ್ವನಿಯಏರಳಿತ (2) | ವ್ಯಾಕರಣಬದ್ಧವಾಗಿ ಓದುವುದರಲ್ಲಿ ಸ್ವಲ್ಪ ಶಬ್ದಗಳ ಅಸ್ಪಷ್ಟತೆ | ವ್ಯಾಕರಣ ಚಿನ್ಹೆಗಳನ್ನು ಕೆಲವೆಡೆ ಉಪಯೋಗಿಸುವುದು | ಧ್ವನಿಯ ಸರಿಯಾಗಿ ಪ್ರದರ್ಶಿಸುವುದುಇರುವದು | ಧ್ವನಿಯಲ್ಲಿ ಸ್ಪಷ್ಟತೆ ಏರಳಿತ ಸರಿಯಾಗಿ ಪ್ರದರ್ಶಿಸುವುದು | |

# ಬರವಣಿಗೆಯ ಕೌಶಲ್ಯ ( Writting Skills)

| Criteria | Needs Improvement<br>0.5 | Satisfactory<br>1.0 | Good<br>1.5 | Excellent<br>02 | |
|---|---|---|---|---|---|
| ಅಕ್ಷರ ಶುದ್ಧತೆ | ಶುದ್ಧ ಮತ್ತು ಸ್ಪಷ್ಟ ಬರವಣಿಗೆಯಲ್ಲಿ ಕೊರತೆ | ಸಾಮಾನ್ಯ ಪ್ರಮಾಣದಲ್ಲಿ ಅಕ್ಷರದ ಶುದ್ಧತೆ | ಮಧ್ಯಮ ಬರವಣಿಗೆ ಶುದ್ಧತೆ | ಅತ್ಯುತ್ತಮ ಬರವಣಿಗೆ | |
| ವಾಕ್ಯ ರಚನಾ ಸಾಮರ್ಥ್ಯ | ವಾಕ್ಯ ರಚನೆ ಅಸ್ಪಷ್ಟತೆ | ಸ್ವಲ್ಪ ಮಟ್ಟಿಗೆ ವಾಕ್ಯ ರಚನಾ ಸಾಮರ್ಥ್ಯ | ವಾಕ್ಯಗಳಲ್ಲಿ ಕೆಲವೊಂದು ದೋಷಗಳು | ವಾಕ್ಯ ರಚನಾ ಸಾಮರ್ಥ್ಯ ಉಚ್ಚ ಮಟ್ಟದಲ್ಲಿದೆ | |
| ವಿಷಯ ಪ್ರಸ್ತುತಿ | ವಿಷಯದ ಅವ್ಯವಸ್ಥಿತ ಅಸ್ಪಷ್ಟ  ಬರವಣಿಗೆ | ಅಂಶಗಳ ಮಾತ್ರ ವ್ಯವಸ್ಥಿತತೆ | ವಿಷಯ ಸ್ಪಷ್ಟತೆ ಆದರೆ ಅನುಕ್ರಮದ ಕೊರತೆ | ವಿಷಯ ವ್ಯವಸ್ಥಿತವಾಗಿ ಕ್ರಮಬದ್ಧವಾಗಿ ಪ್ರಸ್ತುತಪಡಿಸುವಿಕೆ | |
| ಶಬ್ದಕೋಶ ಭಾಷಾ ಶಾಸ್ತ್ರ | ಸೃಜನಶೀಲ ಶುದ್ಧ ಶುದ್ಧ ಬರವಣಿಗೆಯಲ್ಲಿ ಕೊರತೆ | ಸಾಮಾನ್ಯ ಹಂತದಲ್ಲಿ ಸೃಜನಶೀಲ ಶಬ್ದಗಳು | ಕಡಿಮೆ ಪ್ರಮಾಣದ ಸೃಜನಶೀಲ ಶಬ್ದಗಳು | ಶಬ್ದಗಳ ಜೋಡಣೆ ಸಾಮರ್ಥ್ಯ ವ್ಯವಸ್ಥಿತವಾಗಿದೆ | |
| ವ್ಯಾಕರಣ ಶುದ್ಧತೆ | ವ್ಯಾಕರಣಗಳಲ್ಲಿ ಅಶುದ್ಧತೆ | ಸ್ವಲ್ಪ ಪ್ರಮಾಣದಲ್ಲಿ ವ್ಯಾಕರಣದಲ್ಲಿ ಶುದ್ಧತೆ | ಸ್ವಲ್ಪ ಶುದ್ಧ ಹಾಗೂ ಸ್ಪಷ್ಟವಾದ ಬರವಣಿಗೆ | ಸಂಪೂರ್ಣ ಶುದ್ಧ ಹಾಗೂ ಪೂರ್ಣ ಸ್ಪಷ್ಟವಾದ ಬರವಣಿಗೆ | |

# Academic Calender 2025 -26

(Month-wise distribution of course content)

Subject: Kannada ( R 3) Std.: Xth

Term I

| Sr. No. | Month & Year | Unit No. | Topic | Comprehension | Grammar | Writing | Remark |
|---|---|---|---|---|---|---|---|
| 1 | Apr-25 | 1 (Poem) | ಕನ್ನಡ ನುಡಿ | | ಶಬ್ದಾರ್ಥ | ಕವಿತೆಯ ಅನುವಾದ ಲೇಖನ | ಕವಿಯ ಭಾವನೆಯನ್ನು ಅರಿಯುವದು ಕವಿತೆ ಕಂಠಪಾಠ ಮಾಡುವದು |
| 2 | | 2 (Prose) | ನಿಯತ್ತಿನ ಮೌಲ್ಯ | ಪಾಠದ ಸುಲಭ ನಿರೂಪಣೆಯನ್ನು ಬರೆಸುವುದು | ವಾಕ್ಯ ರಚನೆ | ಶುದ್ಧ ಲೇಖನ | |
| 3 | | 3 (Prose) | ಬ್ಯಾಂಕು | | ಸಮಾನಾರ್ಥಿ ಶಬ್ದಗಳು ವಿರುದ್ಧಾರ್ಥಕ ಶಬ್ದಗಳು | | |
| 4 | Jun-25 | 4 (Poem) | ಹೆಮ್ಮೆ ನನಗೆ ಅಮ್ಮ | | | ನಿಬಂಧ ಲೇಖನ ಕಥಾ ಲೇಖನ | ಕವಿತೆಯ ಪ್ರಾಸಭದ್ಧ ಶಬ್ದಗಳನ್ನು ಚರ್ಚಿಸುವುದು |
| 5 | | 5 (Prose) | ಜೋಗ ಜಲಪಾತ | ಪಾಠದ ಸಂಭಾಷಣೆಯನ್ನು ಪಾತ್ರಅಭಿನಯದಂತೆ ಓದಿಸುವುದು | ವಚನಗಳು ವಿಶೇಷಣ ಲಿಂಗ | | |
| 6 | | 6 (Prose) | ಅತ್ತೆ ಮನೆಗೆ ಅಳಿಯ ಬಂದ | ಭಗವಾನ್ ಬುದ್ಧನ ಬಗೆಗಿನ ನಿರೂಪಣೆ ಓದಿಸುವುದು | | ನಿಬಂಧ ಲೇಖನ | ಭಗವಾನ್ ಬುದ್ಧನ ದಯೆ ಅಹಿಂಸೆ ಅರಿಯುವರು |
| 7 | Jul-25 | 7 (Poem) | ಮಾವಿನ ಗೊಲ್ಲೆ | | ಕವಿತೆಯ ಹೊಸ ಶಬ್ದಗಳ ಅರ್ಥ | ಕಥಾ ಲೇಖನ | ಅಮ್ಮನ ಮಮತೆ ತಿಳಿಯುವುದು |
| 8 | | 8 (Prose) | ಸರದಾರ ವಲ್ಲಭಭಾಯಿ ಪಟೇಲ್ | ಗ್ರಹಿಕೆಯ ಗದ್ಯಖಂಡ ಮತ್ತು ಅದರ ಮೇಲಿನ ಪ್ರಶ್ನೋತ್ತರಗಳು | | ವ್ಯವಹಾರಿಕ ಪತ್ರ ಲೇಖನ | ಪತ್ರಗಳ ಬರವಣಿಗೆಯ ಹಾವಭಾವಗಳನ್ನು ಚರ್ಚಿಸುವುದು |
| 9 | | 9 (Prose) | ಅಡಗಿಸಿಟ್ಟ ಚಿನ್ನ | ಪಾಠದ ನಿರೂಪಣೆಯ ಗದ್ಯಖಂಡ ಬರೆಯಿಸಿ ಅದರ ಮೇಲಿನ ಪ್ರಶ್ನೋತ್ತರ | ವಿಶೇಷಣ ವಾಕ್ಯ ರಚನೆ | ಗಾದೆ ಮಾತುಗಳು | |
| 10 | | 10 (Poem) | ಈ ಮಣ್ಣು ನಮ್ಮದು | | ಸಂಧಿ ಪ್ರಕರಣ | ಕಥಾ ಲೇಖನ | ಕವಿತೆ ಕಂಠಪಾಠ ಮಾಡುವದು |
| 11 | Aug-25 | 11 (Prose) | ರೇಷ್ಮೆ ಸಾಕಾಣಿಕೆ | | ಕಠಿಣ ಶಬ್ದಗಳ ಅರ್ಥ | ಖಾಸಗಿ ಪತ್ರ ಮತ್ತು ವ್ಯವಹಾರಿಕ ಪತ್ರ | ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಚರ್ಚಿಸುವುದು |


# Academic Calender 2025 -26

(Month-wise distribution of course content)

Subject: Kannada ( R 3) Std.: Xth


| Sr. No. | Month & Year | Unit No. | Topic | Comprehension | Grammar | Writing | Remark |
|---|---|---|---|---|---|---|---|

| | | | | | | | |
|---|---|---|---|---|---|---|---|
| 12 | Aug-25 | 12 (Prose) | ದೇವಾನಾಂ ಪ್ರಿಯ | | ಸಮನಾರ್ಥಿ ಶಬ್ದ ವಿರುದ್ಧ ಶಬ್ದಗಳು | ಕಥಾ ಲೇಖನ ನಿಬಂಧ ಲೇಖನ | ವಿವಿಧ ವಿಷಯದ ಆತ್ಮಕಥೆಯನ್ನು ಬರೆಯುವದನ್ನು ಚರ್ಚಿಸುವುದು |
| 13 | | 13 (Poem) | ಕಲ್ಲು ಸಕ್ಕರೆ | ನಿಸರ್ಗ ಸೌಂದರ್ಯದ ಸುಲಭ ನಿರೂಪಣಾ ಗದ್ಯಖಂಡದ ಪ್ರಶ್ನೋತ್ತರ ಮತ್ತು ವ್ಯಾಕರಣ | | | ಕವಿತೆಯನ್ನು ಬಾಯಿಪಾಠ ಮಾಡಿ ರಾಗಬದ್ಧವಾಗಿ ಹೇಳಿಸುವುದು |
| 14 | Sep-25 | 14 (Prose) | ಹಂಪೆ | | ವಚನ ಲಿಂಗ ಸಂಧಿ ಪ್ರಕರಣ | ಪ್ರಸಿದ್ಧ ವಿಜ್ಞಾನಿಗಳ ಬಗ್ಗೆ ಕಿರು ಪರಿಚಯದ ನಿಬಂಧ | ಭಾರತೀಯ ಪ್ರಸಿದ್ಧ ವಿಜ್ಞಾನಿಗಳ ಬಗ್ಗೆ ಚರ್ಚಿಸುವುದು |
| 15 | | 15 (Prose) | ಶಿವರಾಮ ಕಾರಂತರು | | | ನಿಬಂಧ ಲೇಖನ | |
| 16 | | 16 (Poem) | ನನ್ನ ದೇಹದ ಬೂದಿ | | ಕಠಿಣ ಶಬ್ದಗಳ ಅರ್ಥ, ವಾಕ್ಯ ರಚನೆ | ಕವಿತೆಯ ಅನುವಾದ | ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಚರ್ಚಿಸುವುದು |
| 17 | Oct-25 | 17 (Prose) | ಪ ರ ಮ ವೀ ರ ಚ ಕ್ರ: ನ ಮ್ಮ ಸಾಹಸಿಗಳು | ವಾಕ್ಯ ರಚನೆ | | | |
| 18 | | 18 (Poem) | ಬಿದಿರು ನಾನಾರಿಗಲ್ಲದವಳು | ಗ್ರಹಿಕೆಯ ಗದ್ಯಖಂಡ ಮತ್ತು ಅವುಗಳ ಪ್ರಶ್ನೋತ್ತರ. | ನಿಸರ್ಗ ಸೌಂದರ್ಯ ಲೇಖನ | | ಆದರ್ಶ ಶಿಸ್ತು ಸಹಬಾಳ್ವೆಯಂತಹ ಗುಣಗಳ ಬಗ್ಗೆ ಚರ್ಚಿಸುವುದು |
| 19 | Nov-25 | 19 (Prose) | ಸೌರ ಕೊಡೆ | | | ಕವಿತೆಯ ಅನುವಾದ | ಕವಿತೆಯನ್ನು ಬಾಯಿಪಾಠ ಮಾಡಿ ರಾಗಬದ್ಧವಾಗಿ ಹೇಳಿಸುವುದು |
| 20 | Dec-25 | 20 (Prose) | ಜನಸಂಖ್ಯಾ ಸ್ಫೋಟ | ಪಾಠದ ಸಂಭಾಷಣೆಯನ್ನು ಪಾತ್ರ ಅಭಿನಯದಂತೆ ಓದಿಸುವುದು ಮತ್ತು ಪ್ರಶ್ನೋತ್ತರ ಚರ್ಚಿಸುವದು. | | ಚಿಹ್ನೆಗಳ ಪರಿಚಯ | |
| 21 | | 21 (Poem) | ಸುಗ್ಗಿ | | ಸಮನಾರ್ಥಕ ಶಬ್ದ , ವಿರುದ್ಧ ಶಬ್ದಗಳು | ನಿಸರ್ಗ ಸೌಂದರ್ಯದ ನಿಬಂಧ | ಕವಿತೆಯನ್ನು ಬಾಯಿಪಾಠ ಮಾಡಿ ರಾಗಬದ್ಧವಾಗಿ ಹೇಳಿಸುವುದು |
| | | | | | | | |
| | | | | | | | |

# Goa Board of Secondary & Higher Secondary Education, Alto, Betim - Goa

## BLUE - PRINT S.S.C EXAMINATION

### Subject : KANNADA (R 3)

| OBJECTIVES | REMEMBERING | | | | UNDERSTANDING | | | | APPLICATION | | | | ANALYSIS | | | | EVALUATION | | | | CREATION | | | | TOTAL |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| CONTENT AREA | VSA | SA-I | SA-II | LA | VSA | SA-I | SA-II | LA | VSA | SA-I | SA-II | LA | VSA | SA-I | SA-II | LA | VSA | SA-I | SA-II | LA | VSA | SA-I | SA-II | LA | |
| | | | | | | | | | | | | | | | | | | | | | | | | | |
| 1. PROSE (Q. 1 to 19) | 4(4) | 4(4) | 9(3) | | | 5(5) | | 4(1) | | | | | | | | | | | | | | | | | 26 |
| | | | | | | | | | | | | | | | | | | | | | | | | | |
| 2. POEM ( Q. 20 to 26) | | 4(4) | | | | | 6(3) | | | | | | | | 3(1) | | | | | | | | | | 13 |
| | | | | | | | | | | | | | | | | | | | | | | | | | |
| 3. GRAMMER ( Q. 27 to 45) | | | | | 12(6) | | | | 2(2) | | | | | 2(2) | | | 2(2) | | | | | | | | 18 |
| | | | | | | | | | | | | | | | | | | | | | | | | | |
| 4. COMPOITION (Q. 46 to 54) | | | | | | | | | | 5(5) | | 6(1) | | | | 6(1) | | | | | | | | 6(1) | 23 |
| | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | |
| | 4 | 8 | 9 | | 12 | 5 | 6 | 4 | 2 | 5 | | 6 | | 2 | 3 | 6 | 2 | | | | | | | 6 | |
| TOTAL | 21 | | | | 27 | | | | 13 | | | | 11 | | | | 2 | | | | 6 | | | | 80 |

GOA BOARD OF SECONDARY AND HIGHER SECONDARY EDUCATION

ALTO BETIM GOA 403521

**DESIGN OF THE QUESTION PAPER – 2025 - 26**

**Subject: Kannada (R 3)** **Std. X**

**Max. Marks: 80** **Time: 3 Hours**

---

**The weightage or the distribution of marks over dimensions of the question paper shall be as follow:**

**1. Weightage of Content/ Subject Units**

| Sr. No. | Subject Units | Marks |
|---|---|---|
| 1 | Prose | 26 |
| 2 | Poem | 13 |
| 3 | Grammar | 18 |
| 4 | Composition | 23 |
| | Total | 80 |

**2. Weightage of Learning Outcomes**

| Sr. No. | Learning Outcomes | Marks | Percentage of Marks |
|---|---|---|---|
| 1 | Knowledge | 24 | 30% |
| 2 | Understanding | 25 | 31% |
| 3 | Application | 13 | 16% |
| 4 | Skill | 18 | 23% |
| | Total | 80 | 100% |

**3. Weightage to forms of Questions**

| Sr. No. | Form of Questions | Number of questions | Total marks |
|---|---|---|---|
| 1 | Very Short Answer type (VSA) | 18 | 18 |
| 2 | Short Answer type I (SA-I) | 23 | 22 |
| 3 | Short Answer type II (SA-II) | 07 | 15 |
| 4 | Long Answer type (LA) | 06 | 25 |
| | Total | 54 | 80 |

**4. The expected time for different type of Question would be as follow.**

| Sr. No. | Form of Questions | Approx. time for each Question in Min. | Number of Questions | Approx. time for each form of Question in Min. |
|---|---|---|---|---|
| 1 | Very Short Answer type (VSA) | 1.8 | 18 | 32 |
| 2 | Short Answer type I (SA-I) | 2 | 23 | 46 |
| 3 | Short Answer type II (SA-II) | 6 | 7 | 42 |
| 4 | Long Answer type (LA) | 12 | 6 | 60 |
| | Total | | 54 | 150 |

**5. Weightage to Difficulty level of Questions**

| Sr. No. | Estimated difficulty level of Questions | Marks | Percentage |
|---|---|---|---|
| 1 | Easy | 21 | 26% |
| 2 | Average | 43 | 54% |
| 3 | Difficult | 16 | 20% |
| | | 80 | 100% |

**Model Question Paper**

**Time: 3 Hours.** | **STD : X (R 3 )** | **Subject : Kannada**

**Total No of Questions : 54.** | **( Printed page's : 7 )** | **Maximum Marks : 80**

---

*** ಈ ಕೆಳಗೆ ಕೊಟ್ಟಿರುವ ಪರ್ಯಾಯ ವಾಕ್ಯಗಳಿಂದ ಸರಿಯಾದ ಒಂದನ್ನು ಆರಿಸಿ. ವಾಕ್ಯ ಪೂರ್ಣ ಮಾಡಿ ಬರೆಯಿರಿ.**

1. ಉಪಹಾರ ಸೇವಿಸಿ ಕೈ ತೊಳೆಯಲು ಬಂದ ಶಂಕರ್ ನನ್ನು ತಂದೆ ಕರೆಯಲು ಕಾರಣವೇನೆಂದರೆ. ------------ (1)

- ತೋಟಕ್ಕೆ ನೀರು ಹಾಕಲು.
- ತೋಟದಲ್ಲಿ ಕೆಲಸ ಮಾಡಲು.
- ಕೈತೋಟದಲ್ಲಿ ಒದಗಿದ ಬಂಗಾರದ ಗಣಿ ತೋರಿಸಲು
- ತಮ್ಮ ತೋಟದ ವಿಸ್ತಾರವನ್ನು ತೋರಿಸಲು

2. ಕಾರಂತರು ಕಾಲೇಜಿಗೆ ಶರಣು ಹೊಡೆದು ಅಸಹಕಾರ ಚಳುವಳಿಗೆ ಧುಮುಕಿದರು ಏಕೆಂದರೆ .................. (1)

- ಕಾಲೇಜಿನ ಪರೀಕ್ಷೆಯಲ್ಲಿ ನಪಾಸಾಗಿದ್ದರಿಂದ
- ಅವರ ಮೇಲೆ ಗಾಂಧೀಜಿಯವರ ಸಂದೇಶದ ಪ್ರಭಾವ ಬೀರಿತ್ತು
- ಅವರಿಗೆ ಕಾಲೇಜು ಕಲಿಯಲು ಮನಸ್ಸಿರಲಿಲ್ಲ.
- ಮನೆಯಲ್ಲಿಯ ಕಷ್ಟ ಇದ್ದುದರಿಂದ

*** ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು/ ಕೇಳಿದರು.**

3. " ರಾಜು ನಿಮ್ಮಿಂದ ನನಗೊಂದು ಸಹಾಯ ಆಗಬೇಕು ಅದಕ್ಕಾಗಿ ಬಂದಿದ್ದೇನೆ ." (1)

4." ಸಾಹೇಬರೇ ಇವರಿಗೆ ಉಳಿತಾಯ ಖಾತೆ ಪ್ರಾರಂಭಿಸುವ ವಿಧಾನ ಹೇಳಿರಿ". (1)

5. " ಏನು ನಮ್ಮ ಕೈತೋಟದಲ್ಲಿ ಬಂಗಾರದ ಗಣಿ ಇದೆಯೇ". (1)

6. " ಇಷ್ಟು ಚಿಕ್ಕ ಮರಿಗಳಿಗೆ ಹೇಗೆ ಆಹಾರ ತಿನ್ನಿಸುವಿರಿ". (1)

*** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

7. ಪರಮ ವೀರ ಚಕ್ರದ ರಚನೆಯನ್ನು ಮಾಡಿದವರು ಯಾರು ? (1)

8. ಯಂಕಣ್ಣನ ಹೆಂಡತಿಯ ಹೆಸರೇನು ? (1)

9. ಸರ್ ಎಂ. ವಿಶ್ವೇಶ್ವರಯ್ಯನವರು ಜೋಗವನ್ನು ನೋಡಿ ಏನೆಂದು ಹೇಳಿದರು ? (1)

10. ರೇಷ್ಮೆ ಹುಳಗಳ ಬೆಳವಣಿಗೆ ಅವಸ್ಥೆಗಳು ಯಾವುವು ? (1)

11. ಹಂಪೆಯು ಎಲ್ಲಿದೆ ? (1)

*** ಕಂಸದಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಯೋಗ್ಯವಾದ ಉತ್ತರವನ್ನು ಆರಿಸಿ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ.**

12. ರಾಜು ತಂದೆಗೆ .................... ರೂಪಾಯಿಗಳನ್ನು ಕಳುಹಿಸಿದ್ದನು. (1)

- ನಾಲ್ಕುನೂರು
- ಒಂದು ಲಕ್ಷ

- ಎರಡು ಲಕ್ಷ
- ಐನೂರು

13. ಜೋಗ ಜಲಪಾತವು .................. ಕವಲುಗಳಾಗಿ ಧುಮುಕುತ್ತವೆ. ( 1 )

- ನಾಲ್ಕು
- ಹತ್ತು
- ಇಪ್ಪತ್ತು
- .ಐದು

*** ಕೆಳಗಿನ ಬೇಕಾದ ಮೂರು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (3x3=9)**

14. ಗ್ರಾಮೀಣ ಬ್ಯಾಂಕಿನ ಕಾರ್ಯಗಳನ್ನು ಬರೆಯಿರಿ.

15. ಬೌದ್ಧ ಧರ್ಮ ವಿಪತ್ತಿಗೆ ತಲುಪಿದಾಗ ಅಶೋಕನು ಏನು ಮಾಡಿದನು ?

16. ಹಂಪಿಯಲ್ಲಿನ ಕಲ್ಲಿನ ರಥದ ಕುರಿತು ಬರೆಯಿರಿ ?

17. ಓಝೋನ್ ಪದರಿನ ರಕ್ಷಣೆ ಹೇಗೆ ಮಾಡಬೇಕು ?

*** ಈ ಕೆಳಗಿನ ಯಾವುದೇ ಒಂದು ಪ್ರಶ್ನೆಗೆ ನಾಲ್ಕು ಅಥವಾ ಐದು ವಾಕ್ಯದಲ್ಲಿ ಉತ್ತರ ಬರೆಯಿರಿ. (4x1=4)**

18. ಶಿವರಾಂ ಕಾರಂತರು ಸ್ಥಾಪಿಸಿದ ಬಾಲವನ ಶಾಲೆಯ ಕುರಿತು ಬರೆಯಿರಿ.

19. ಯಂಕಣ್ಣನ ಅತ್ತೆ ಕಳ್ಳ ಕಳ್ಳ ಎಂದು ಏಕೆ ಚೀರಿದಳು ?

*** ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

20. ಕನ್ನಡ ನುಡಿ ಕವಿತೆಯನ್ನು ಯಾರು ಬರೆದಿದ್ದಾರೆ ? (1)

21. ತಾಯಿಯನ್ನು ನೋಡಲು ಆಕಾಶದಲ್ಲಿ ಯಾರು ನೆರೆದಿದ್ದಾರೆ ? (1)

22. ದೇವರ ದೇಟಿನ ಕಾಯಿಗಳು ಯಾರು ಎಂದು ಕವಿ ಹೇಳಿದ್ದಾನೆ ? (1)

23.. ಯಾವ ಯಾವ ಧರ್ಮಗಳ ಮಹಾನ್ ಸಾಗರ ನಮ್ಮ ದೇಶದಲ್ಲಿದೆ ? (1)

*** ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯದಲ್ಲಿ ಉತ**

24. ಶ್ರೀ ಕೃಷ್ಣನ ನಾಮದ ಮಹತ್ವವನ್ನು ಕವಿ ಹೇಗೆ ತಿಳಿಸಿದ್ದಾರೆ ? (2)

25. ಭೂಮಿಯ ಮೇಲೆ ಎಂತಹ ಎರಡು ಗುಣಗಳ ಜನರಿದ್ದಾರೆ ? (2)

26. ಬಿದಿರಿನ ಉಪಯೋಗಗಳನ್ನು ಬರೆಯಿರಿ . (2)

27. ' ನಿಕ್ಷೇಪ ' **ಈ ಶಬ್ದದ ಅರ್ಥ ಗುರುತಿಸಿ ಬರೆಯಿರಿ.** ( 1 )

- ಬಂಗಾರ
- ಗುಹೆ

- ಹುದುಗಿಟ್ಟ ನಿಧಿ
- ಜಮೀನು

28. ' ವಿಹಾರ ' **ಈ ಶಬ್ದದ ಅರ್ಥ ಗುರುತಿಸಿ ಬರೆಯಿರಿ.** ( 1 )

- ಬೌದ್ಧ ಮಂದಿರ
- ಜೈನ ಮಂದಿರ
- ಪಗೊಡ
- ದೇವಸ್ಥಾನ

* **ಕೆಳಗಿನ ವಾಕ್ಯಗಳಲ್ಲಿಯ ವಿಶೇಷಣ ಶಬ್ದಗಳನ್ನು ಗುರುತಿಸಿ ಬರೆಯಿರಿ.**

29. ಬೆಕ್ಕು ಮೆಲ್ಲನೆ ಬಂದು ಹಾಲು ಕುಡಿಯಿತು. . **( 1 )**

- ಬೆಕ್ಕು
- ಮೆಲ್ಲಗೆ ಬಂದು
- ಹಾಲು
- ಕುಡಿಯಿತು

30. ತೋಟದ ಯಜಮಾನನ ನಿಷ್ಠುರ ಸ್ವಭಾವದವನು. ( 1 )

- ನಿಷ್ಠುರ
- ತೋಟದ
- ಸ್ವಭಾವ
- ಯಜಮಾನ

31. ' ಪರೋಪಕಾರ ' **ಈ ಶಬ್ದದ ಸಂಧಿ ವಿಗ್ರಹಿಸಿ ಬರೆದ ರೂಪವನ್ನು ಗುರುತಿಸಿ ಬರೆಯಿರಿ.** ( 1 )

- ಪರೋಪ + ಕಾರ
- ಪರರ + ಉಪಕಾರ
- ಪರ + ಉಪಕಾರ
- ಪರೋಪ + ಆಕಾರ

32. ' ಸೂರ್ಯೋದಯ ' **ಈ ಶಬ್ದದ ಸಂಧಿ ವಿಗ್ರಹಿಸಿ ಬರೆದ ರೂಪವನ್ನು ಗುರುತಿಸಿ ಬರೆಯಿರಿ.** ( 1 )

- ಸೂ + ಉದಯ
- ಸೂರ್ಯನ + ಉದಯ

- ಸೂರ್ಯೋ + ಉದಯ
- ಸೂರ್ಯ + ಉದಯ

33. ' ಮರ ' **ಈ ಶಬ್ದದ ಬಹುವಚನ ರೂಪವನ್ನು ಗುರುತಿಸಿ ಬರೆಯಿರಿ.** ( 1 )

- ಮರಗಳು
- ಮರದ
- ಮರವು
- ಮರದಿಂದ

34. ' ಭಕ್ತರು ' ಈ ಶಬ್ದದ ಏಕವಚನ ರೂಪವನ್ನು ಗುರುತಿಸಿ ಬರೆಯಿರಿ. ( 1 )

- ಭಕ್ತಗಳು
- ಭಕ್ತೆ
- ಭಕ್ತ
- ಭಕ್ತಿಯ

35. ' ಬಾಲಕ ' **ಈ ಶಬ್ದದ ಸ್ತ್ರೀಲಿಂಗ ರೂಪವನ್ನು ಗುರುತಿಸಿ ಬರೆಯಿರಿ.** **(1)**

- ಬಾಲೆ
- ಬಾಲಕವು
- ಬಾಲಕರು
- ಬಾಲಕಿ

36. ' ಓಟಗಾರ್ತಿ ' **ಈ ಶಬ್ದದ ಪುಲ್ಲಿಂಗ ರೂಪವನ್ನು ಗುರುತಿಸಿ ಬರೆಯಿರಿ.** **( 1 )**

- ಓಡುವ
- ಓಡುವದು
- ಆಟಗಾರ
- ಓಟದ

37. ' ಆಗಮನ ' **ಈ ಶಬ್ದದ ವಿರುದ್ಧಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.** **( 1 )**

- ಆಗಮ
- ನಿರ್ಗಮನ

- ನಿರ್ಗಮಿಸು
- ನಿರ್ವಾಣ

38. ‘ ಸ್ವರ್ಗ ’ **ಈ ಶಬ್ದದ ವಿರುದ್ಧಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.** **( 1 )**

- ನಗರ
- ಭೂಲೋಕ
- ಯಮಲೋಕ
- ನರಕ

39. ‘ ಗಜ ’ **ಈ ಶಬ್ದದ ಸಮನಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.** **( 1 )**

- ಕುದುರೆ
- ಆನೆ
- ನರಿ
- ಕರಡಿ

40. ‘ ಸೂರ್ಯ ’ **ಈ ಶಬ್ದದ ಸಮನಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.** ( 1 )

- ರವಿ
- ನಕ್ಷತ್ರ
- ಚಂದ್ರ
- ಆಕಾಶ

* **ಈ ಕೆಳಗಿನ ಶಬ್ದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

41. ಕಂಗೊಳಿಸು ( 1 )

42. ಪಲ್ಲಕ್ಕಿ ( 1 )

* **ಈ ಕೆಳಗಿನ ಬೇಕಾದ ಎರಡು ಗಾದೆ ಮಾತುಗಳ ಸರಳ ಅರ್ಥ ಬರೆಯಿರಿ.** (1X2=2)

43. ಜನಸೇವೆಯೇ ಜನಾರ್ಧನನ ಸೇವೆ.

44. ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿ ಇಲ್ಲ.

45. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

* **ಕೆಳಗಿನವುಗಳಲ್ಲಿ ಯಾವುದೇ ಒಂದು ವಿಷಯದ ಕುರಿತು ಹದಿನೈದು – ಇಪ್ಪತ್ತು ವಾಕ್ಯಗಳಲ್ಲಿ ನಿಬಂಧ ಬರೆಯಿರಿ.** **( 6 )**

46. • ನಾನು ಪ್ರಧಾನಮಂತ್ರಿಯಾದರೆ -------

**(ಅಥವಾ)**

- ನಾ ಕಂಡ ವಸ್ತು ಪ್ರದರ್ಶನ

(ಅಥವಾ)

- ಸಂಗಣಕದ ಆತ್ಮಕಥೆ

(ಅಥವಾ)

- ಸುಭಾಷ್ ಚಂದ್ರ ಬೋಸ್

*** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆದರಿಸಿ ಪತ್ರ ಬರೆಯಿರಿ. ( 6 )**

47. • ರಾಮು / ರಾಧಾ ದೇಸಾಯಿ ಮನೆ ನಂಬರ. 40/5 ಶಾಸ್ತ್ರೀ ನಗರ ನ್ಯೂವಾಡಾ ವಾಸ್ಕೋ ಇವನು/ ಇವಳು ತನ್ನ ಗೆಳೆಯ /ಗೆಳತಿ ಇವರಿಗೆ ಹುಟ್ಟು ಹಬ್ಬದ ಶುಭಾಶಯಗಳನ್ನು ಬರೆಯುವ ಮಾದರಿಯಲ್ಲಿ ಒಂದು ಪತ್ರ ಬರೆಯಿರಿ.

(ಅಥವಾ)

• ಇಂದಿರಾನಗರ ಚೆಂಬಲ್ ಗೋವಾ ನಾಗರಿಕರು ತಮ್ಮ ಹಳ್ಳಿಯಲ್ಲಿ ಪ್ರೌಢಶಾಲಾ ವಸತಿ ಗ್ರಾಮವನ್ನು ಕಟ್ಟಿಸಿ ಕೊಡುವಂತೆ ವಿನಂತಿಸಿ ನಗರಸಭೆ ಆರೋಗ್ಯ ಅಧಿಕಾರಿ ಮುನ್ಸಿಪಲ್ ಕಾರ್ಪೊರೇಷನ್ ಪಣಜಿ ಗೋವಾ ಇವರಿಗೆ ಬರೆಯುವ ಮಾದರಿಯಲ್ಲಿ ಒಂದು ಮನವಿ ಪತ್ರ ಬರೆಯಿರಿ.

*** ಕೆಳಗಿನ ವಾಕ್ಯಗಳ ಸಹಾಯದಿಂದ ಒಂದು ಸ್ವತಂತ್ರವಾದ ಕಥೆಯನ್ನು ರಚಿಸಿ ಬರೆಯಿರಿ ಮತ್ತು ಯೋಗ್ಯತಲೆ ಬರಹ ನೀಡಿರಿ. (6)**

48. ಒಂದು ಕಾಡಿನಲ್ಲಿ ಮೊಲ ಮತ್ತು ಆಮೆ ವಾಸವಾಗಿದ್ದವು. ................ ಮಾತನಾಡುತ್ತಾ ಕಾಲ ಕಳೆಯುತ್ತಿದ್ದವು. ................ ತನಗಿಂತ ಜೋರಾಗಿ ಯಾರೂ ಓಡಲಾರರು .................... ಒಂದು ಪಂದ್ಯವನ್ನು ಆಡಲು ನಿಶ್ಚಯಿಸಿದವು. ................ ಮೊಲ ಜೋರಾಗಿ ಓಡತೊಡಗಿತು . ....................... ಆಮೆಯು ಎಲ್ಲಿಯೂ ಕಾಣಲಿಲ್ಲ ................. ಮರದ ಕೆಳಗೆ ಸ್ವಲ್ಪ ಮಲಗಿಕೊಂಡಿತು ................... ಅದು ಎಚ್ಚರವಾದಾಗ ತುಂಬಾ ಹೊತ್ತಾಗಿತ್ತು. .................. ಆಮೆ ಈ ಮೊದಲೇ ಹೋಗಿ ಅಲ್ಲಿ ಕುಳಿತಿತ್ತು .................. ಆಮೆ ತನ್ನ ಗುರಿಯನ್ನು ತಲುಪಿತು.

- **ಕೆಳಗಿನ ಗದ್ಯ ಭಾಗವನ್ನು ಓದಿ ಆದರೆ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

ಸ್ವಾತಂತ್ರ್ಯ ಪೂರ್ವದಲ್ಲಿ ಹರಿದು ಹಂಚಿ ಹೋಗಿದ್ದ ಭಾರತವನ್ನು ಒಂದುಗೂಡಿಸಿ ಸಂಸ್ಥಾನಗಳನ್ನು ವಿಲೀನಗೊಳಿಸಿ ಎಲ್ಲರನ್ನೂ ಒಂದೇ ಸೂರಿನಡಿನಲ್ಲಿ ತರಲು ಶ್ರಮಿಸಿದವರು. ಸರದಾರವಲ್ಲಭಭಾಯಿ ಪಟೇಲರು ಸ್ವತಂತ್ರ ಭಾರತದ ನವ ನಿರ್ಮಾಣದಲ್ಲಿ ಅವರ ಪಾತ್ರ ಹಿರಿಯದು.

ಕ್ರಿ. ಶ. ೧೯೪೭ ಅಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. ವಲ್ಲಭಭಾಯಿಯರು ಸ್ವತಂತ್ರ ಭಾರತದ ಪ್ರಥಮ ಗೃಹ ಮಂತ್ರಿಯಾದರು. ಅಖಂಡ ಭಾರತದ ನಿರ್ಮಾಣದಲ್ಲಿ ವಲ್ಲಭಭಾಯಿ ಪಟೇಲರು ಬಹು ಮುಖ್ಯ ಪಾತ್ರ ವಹಿಸಿದರು. ಎಲ್ಲಾ ಸಂಸ್ಥಾನಗಳನ್ನು ಒಗ್ಗೂಡಿಸಲು ಶ್ರಮಿಸಿದರು. ಸಂಸ್ಥಾನ ವಿಲೀನಿಕರಣಕ್ಕೆ ಹೈದರಾಬಾದ್ ನಿಜಾಮನು, ಜುನಾಗಡದ ನವಾಬ ಮತ್ತು ಕಾಶ್ಮೀರದ ರಾಜ ಇವರು ಒಪ್ಪಲಿಲ್ಲ. ನಿಜಾಮನನ್ನು ಬಗ್ಗು ಬಡಿಯಲು ಸೈನ್ಯ ಪ್ರವೇಶಿಸುವಂತೆ ಮಾಡಿದರು . ಆಗ ನಿಜಾಮನು

ಸಂಸ್ಥಾನಗಳ ವಿಲೀನಿಕರಣಕ್ಕೆ ಒಪ್ಪಿಗೆ ನೀಡಿದರು. ಪಟೇಲರ ಸಾಹಸವನ್ನು ಕಂಡು ನವಾಬ ಮತ್ತು ಕಾಶ್ಮೀರ ರಾಜ ಹೆದರಿ ವಿಭಜನೆಗೆ ಒಪ್ಪಿಗೆ ನೀಡಿದರು. ಈ ರೀತಿಯಾಗಿ ದೇಶದ ಐಕ್ಯತೆ ಮತ್ತು ಅಖಂಡತೆಗೆ ಸರದಾರರ ಕೊಡುಗೆ ಅಪಾರವಾಗಿದೆ.

ಸರದಾರರ ದೇಶದ ಐಕ್ಯತೆಗಾಗಿ ಗಾಂಧೀಜಿಯವರ ಮಾತಿನಂತೆ ನಡೆದರು. ಗಾಂಧೀಜಿಯವರ ಹತ್ಯೆಯ ಸುದ್ದಿ ಕೇಳಿ ಮಗುವಿನಂತೆ ಅತ್ತರು. ಭಾರತದ ಐಕ್ಯತೆ ಹಾಗೂ ಸಮಗ್ರತೆಗಾಗಿ ಶ್ರಮಿಸಿದರು. ಬಿಡುವಿಲ್ಲದ ಕಾರ್ಯಗಳು ಹೆಚ್ಚಾಗಿ ಸರದಾರರ ದೇಹ ಆರೋಗ್ಯ ಕ್ಷೀಣಿಸಿತು. ತಮ್ಮ ಎಪ್ಪತ್ತನೇ ವಯಸ್ಸಿನಲ್ಲಿ ಅಂದರೆ 15 ಡಿಸೆಂಬರ್ 1950 ರಲ್ಲಿ ಮುಂಬೈಯಲ್ಲಿ ವಿಧಿವಶರಾದರು .

ಭಾರತವು ಕ್ರಿ. ಶ. 1991 ಜೂನ್ 17ರಂದು ಮರಣೋತ್ತರವಾಗಿ ಭಾರತ ರತ್ನ ಪುರಸ್ಕಾರವನ್ನು ನೀಡಿ ಗೌರವಿಸಿತು. ಸರದಾರರು ಉತ್ತಮ ಕಾರ್ಯದಕ್ಷತೆಯುಳ್ಳವರು, ಶಿಸ್ತು ಪ್ರಿಯರು ಆಗಿದ್ದರು. ದೇಶದ ಐಕ್ಯತೆ ಹಾಗೂ ಅಖಂಡತೆ ಮಹಾಶಿಲ್ಪಿ ಎಂದು ಅವರ ಹೆಸರು ಚಿರಸ್ಮರಣೀಯವಾಗಿದೆ .

**ಪ್ರಶ್ನೆಗಳು**:

49. ಭಾರತಕ್ಕೆ ಯಾವಾಗ ಸ್ವಾತಂತ್ರ್ಯ ದೊರಕಿತು ? ( 1 )

50. ಸಂಸ್ಥಾನಗಳನ್ನು ಒಗ್ಗೂಡಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ ? ( 1 )

51. ವಲ್ಲಭಭಾಯಿ ಪಟೇಲರು ದೇಶದ ಐಕ್ಯತೆಗಾಗಿ ಯಾರ ಮಾತಿನಂತೆ ನಡೆದರು ? ( 1 )

52. ವಲ್ಲಭಭಾಯಿ ಪಟೇಲರು ಎಷ್ಟನೇ ವಯಸ್ಸಿನಲ್ಲಿ ವಿಧಿವಶನಾದರು ? ( 1 )

53. ವಲ್ಲಭಭಾಯಿ ಪಟೇಲರಿಗೆ ಭಾರತ ರತ್ನ ಪ್ರಶಸ್ತಿ ಯಾವಾಗ ನೀಡಿ ಗೌರವಿಸಿದ್ದರು ? ( 1 )

*** ಈ ಕೆಳಗಿನ ಕವಿತೆಗಳ ಸರಳ ಅರ್ಥ ಬರೆಯಿರಿ.**

54. * ಕಣವನು ಕಡಿಯುತ ನೀರನು ಹೊಡೆಯುತಾ ( 3 )

ಮೇಟಿಯ ಕುಣಿಯನು ಅಗೆಯುವರು
ತೆನೆಯನ್ನು ಮರೆಯುತ ಹಾಡನು ಹಾಡುತ
ಗುಂಪಿಯ ನಡೆಯುತ ಒಗೆಯುವರು.

( ಅಥವಾ )

- ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ

  ಸುಟ್ಟರೆ ನೋಸಲಿಗೆ ವಿಭೂತಿಯಾದೆ

ತಟ್ಟದೇ ಹಾಕಿದರೆ ಮೇಲು ಗೊಬ್ಬರವಾದೆ

ನೀನಾರಿಗಾದೆಯೋ ಎಲೆ ಮಾನವ !

####################

# Study areas for internal assessment.

**Std. X** **Subject: Kannada (R 3)**

- The student may choose anyone topic from each of the 4 skills.
- 5 marks per skill. Total marks 20.
- Assessment may follow the suggested criteria and records maintained
- All assessment must be completed by December 2024.

I. **Listening skills ( ಆಲಿಸುವಿಕೆಯ ಕೌಶಲ್ಯಗಳು)**. (5 marks)

ಮೌಖಿಕ ಗ್ರಹಿಕೆ ಯಾವುದೇ ಒಂದು ಪರಿಚ್ಛೇದ ಓದುಗಾರಿಕೆಯ ಧ್ವನಿ ಮುದ್ರಣ ತಯಾರಿಸಿ ವಿದ್ಯಾರ್ಥಿಗಳಿಗೆ ಆಲಿಸಲು ಹೇಳುವುದು ಆನಂತರ ಅದರ ಮೇಲಿನ 10 ಪ್ರಶ್ನೆಗಳನ್ನು ಕೇಳಿ ಅವರಿಂದ ಉತ್ತರವನ್ನು ಪಡೆಯುವದು. ಉದಾಹರಣೆ ಸರಿಯೋ ತಪ್ಪು, ಒಂದೇ ವಾಕ್ಯದಲ್ಲಿ ಉತ್ತರಿಸುವುದು, ಬಿಟ್ಟ ಸ್ಥಳ ತುಂಬುವುದು, ಸರಿಯಾದ ಉತ್ತರ ಗುರುತಿಸುವದು, ಪ್ರತಿಯೊಂದು ಪ್ರಶ್ನೆಗೆ ½ ಗುಣಗಳು ½ x 10=5.

*ಆಕಾಶವಾಣಿ ದೂರದರ್ಶನಗಳಲ್ಲಿ ತಾವು ಕೇಳಿದ ವಾರ್ತೆಗಳ ಮುಖ್ಯಾಂಶಗಳನ್ನು ಸಂಗ್ರಹಿಸಿ ಅವುಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಲು ಹೇಳುವದು.

* ದೀಕ್ಷಾ ಆಡಿಯೋ (Diksha audio lessons) ಆಲಿಸಲು ಕೊಟ್ಟು ಅವುಗಳ ಮೇಲಿನ ಪ್ರಶ್ನೆಗಳಿಗೆ ಉತ್ತರ ಪಡೆಯುವುದು.

* ಜಲಪಾತದ ವರ್ಣನೆ ಇರುವ ಆಡಿಯೋ ಕೇಳಿಸಿ ಉತ್ತರಿಸಲು ಹೇಳುವುದು.

| | Criteria for listening skills | Marks |
|---|---|---|
| 1 | ಕೇಂದ್ರೀಕರಿಸುವ ಸಾಮರ್ಥ್ಯ | 1 |
| 2 | ತಿಳುವಳಿಕೆ | 1 |
| 3 | ಗಮನಕೊಟ್ಟು ಕೇಳುವ ಸಾಮರ್ಥ್ಯ | 1 |
| 4 | ಪ್ರತಿಕ್ರಿಯೆಯಲ್ಲಿ ನಿಖರತೆ | 1 |
| 5 | ಪ್ರಮುಖ ಅಂಶಗಳನ್ನು ಸಂಕ್ಷಿಪ್ತಗೊಳಿಸುವ ಸಾಮರ್ಥ್ಯ | 1 |

2. **Speaking skills. (ಮಾತುಗಾರಿಕೆಯ ಕೌಶಲ್ಯಗಳು )** (5 marks)

ವ್ಯಕ್ತಿಯ ಜೊತೆ ಕಾಲ್ಪನಿಕ ಸಂದರ್ಶನ ನಡೆಸಿದ ಎರಡು ನಿಮಿಷದ ವಿಡಿಯೋ ತಯಾರಿಸಿ ಕೊಡುವುದು ಉದಾಹರಣೆ: ಸ್ವಾಮಿ ವಿವೇಕಾನಂದ, ಮದರ್ ತೆರೇಸಾ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ ಸರದಾರ ವಲ್ಲಭಾಯಿ ಪಟೇಲ್ ಇತ್ಯಾದಿ.

* Monologue (ಆತ್ಮಗತ ಭಾಷಣ)

ಎರಡು ನಿಮಿಷ ದ ವ್ಯಕ್ತಿಗತ ಚಿತ್ರಣವನ್ನು ತೋರಿಸುವ ವಿಡಿಯೋ ಮಾಡುವುದು ಉದಾಹರಣೆ ಯಾವುದೇ ಉದ್ಯೋಗಕ್ಕೆ ಸಂಬಂಧಿಸಿದ ವ್ಯಕ್ತಿಯ ನಟನೆ ಮಾಡಿ ತೋರಿಸುವ ಅಂದರೆ ತರಕಾರಿ ಮಾರುವವಳು, ಮೀನು ಮಾರುವವರು, ಬಸ್ ಕಂಡಕ್ಟರ್, ಆಟಗಾರ, ಕನ್ನಡದ ಗಾಯಕ.

- ಸಹಜ ಮತ್ತು ನಿರರ್ಗಳವಾಗಿ ಮಾತನಾಡುವುದನ್ನು ಪರೀಕ್ಷಿಸುವುದು (ಒಂದು ನಿಮಿಷದ ಭಾಷಣ)
- ಜನಸಂಖ್ಯಾ ಸ್ಫೋಟದ ಮೇಲೆ ಚರ್ಚೆ ಮಾಡಿಸುವುದು.
- ಯಾವುದೇ ಒಂದು ಕೊಟ್ಟ ವಿಷಯದ ಬಗ್ಗೆ ಐದರಿಂದ ಹತ್ತು ವಾಕ್ಯಗಳಲ್ಲಿ ತಕ್ಷಣ ಮಾತನಾಡಲು ಹೇಳುವುದು ಅದರ ಚಿತ್ರೀಕರಣ((video) ವನ್ನು ಶಿಕ್ಷಕರು ಮಾಡಿ ಇಡಬೇಕು.

ಉದಾಹರಣೆ ನೆಚ್ಚಿನ ಪ್ರಾಣಿ, ನನ್ನ ತಾಯಿ, ಸ್ನೇಹಿತ, ನನ್ನ ಶಾಲೆ, ಹವ್ಯಾಸ, ನನ್ನ ಊರು ಇತ್ಯಾದಿ.

- ನಿಮ್ಮ ಜೀವನದಲ್ಲಿ ಮರೆಯಲಾಗದ ಘಟನೆ ಬಗ್ಗೆ ಎರಡರಿಂದ ಮೂರು ನಿಮಿಷದ ಚಿತ್ರೀಕರಣವನ್ನು( video) ವನ್ನೂ ಕೊಡುವುದು. ಉದಾಹರಣೆ ನಿಮ್ಮ ಕುಟುಂಬದವರೊಂದಿಗೆ ಅಥವಾ ಸ್ನೇಹಿತರೊಂದಿಗೆ ಪಡೆದ ಒಂದು ದಿನದ ಪ್ರವಾಸದ ಅನುಭವದ ಚಿತ್ರೀಕರಣ.

| | Criteria for speaking skills | Marks |
|---|---|---|
| 1 | ಆತ್ಮವಿಶ್ವಾಸ | 1 |
| 2 | ವಾಕ್ಯ ರಚನಾ ಸಾಮರ್ಥ್ಯ | 1 |
| 3 | ಉಚ್ಚಾರನೆಯಲ್ಲಿ ಶುದ್ಧತೆ | 1 |
| 4 | ನಿರರ್ಗಳತೆ | 1 |
| 5 | ಸುಸಂಬದ್ಧತೆ | 1 |

3. **Reading skills. (ಓದು ಗಾರಿಕಾ ಕೌಶಲ್ಯಗಳು).** (5 marks)

ಎಂದು 6 ಪರಿಚ್ಛೇದ ದಿನಪತ್ರಿಕೆಯಲ್ಲಿ ವರದಿ ವೃತ್ತಾಂತ ಇತ್ಯಾದಿ ವಿಷಯಗಳನ್ನು ವಯಕ್ತಿಕವಾಗಿ ಓದಿಸುವುದು

- ಸಂಭಾಷಣೆಯ ವೃತಾಂತ, ಇದನ್ನು ಗುಂಪಿನಲ್ಲಿಯೂ ಓದಿಸಬಹುದು. ಓದುವಾಗ ಸ್ಪಷ್ಟ ಉಚ್ಚಾರಣೆ, ಹಾವ ಭಾವ ವ್ಯಕ್ತಪಡಿಸುವುದು, ವಿವಿಧ ಚಿನ್ಹೆಗಳನ್ನು ಲಕ್ಷದಲ್ಲಿಟ್ಟು ಓದುವುದು, ಶಬ್ದಗಳ ಉಚ್ಚಾರಣೆ, ಒತ್ತಕ್ಷರಗಳ ಸ್ಪಷ್ಟತೆ ಯೋಗ್ಯವಾಗಿರಬೇಕು.

| | Criteria for Reading skills | Marks |
|---|---|---|
| 1 | ಉಚ್ಚಾರಣಾ ಶುದ್ಧತೆ | 1 |
| 2 | ಓದಿನಲ್ಲಿ ನಿರರ್ಗಗಳತೆ | 1 |
| 3 | ಅಭಿವ್ಯಕ್ತಿ | 1 |
| 4 | ಸಮಯ ಪ್ರಜ್ಞೆಗೆ ಬದಲಾವಣೆ | 1 |
| 5 | ಅಂತಕರಣ | 1 |

4**. Writing skills. (ಬರವಣಿಗೆಯ ಕೌಶಲ್ಯ).** (5 marks)

* ನಿಬಂಧಾತ್ಮಕ ಲೇಖನ ಮಾಡಿಸುವುದು ಕೆಳಗೆ ಕೊಟ್ಟ ವಾಕ್ಯ ರಚಿಸಿ ಬರೆಯಿಸುವುದು ಸಂಭಾಷಣೆಯನ್ನು ಪೂರ್ಣಗೊಳಿಸಿ ಬರೆಯಿರಿ ಉದಾಹರಣೆ ಬ್ಯಾಂಕ್ ಅಧಿಕಾರಿ—ಗ್ರಾಹಕ. ವೈದ್ಯ- ರೋಗಿ, ಶಿಕ್ಷಕ -ವಿದ್ಯಾರ್ಥಿ ನಿರ್ವಾಹಕ -ಪ್ರಯಾಣಿಕ , ಹೈನುಗಾರಿಕೆಯ ಸಂಭಾಷಣೆ.

* ತಮ್ಮ ಕೋಣೆಯಲ್ಲಿರುವ ಐದು ವಸ್ತುಗಳ ಹೆಸರು ಬರೆದು ಅವುಗಳ ಉಪಯೋಗದ ಮಾಹಿತಿಯನ್ನು ಬರೆಯಿಸುವದು. ಉದಾಹರಣೆ, ವರ್ಗಕೋಣೆ ಉದ್ಯಾನವನ, ಅಡುಗೆ ಮನೆ ಇತ್ಯಾದಿ.

*ನಿರ್ದೋಷವ ಶ್ರುತ ಲೇಖನ ಮಾಡಲು ಹೇಳುವುದು. ನಿರ್ದೋಷ ಅನು ಲೇಖನವನ್ನು ಮಾಡಿಸುವುದು.

*ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡ ಕವಿ ಪರಿಚಯ ಬರೆಯುವುದು.

*ಐತಿಹಾಸಿಕ ಸ್ಥಳಗಳ ಬಗ್ಗೆ ಮಾಹಿತಿ ಬರೆದು ಯೋಗ್ಯ ಚಿತ್ರಗಳನ್ನು ಅಂಟಿಸುವುದು.

*ಕನ್ನಡ ಭಾಷೆ ಹಳೆಗನ್ನಡ ಮತ್ತು ಹೊಸಗನ್ನಡ ಇವುಗಳ ಬಗ್ಗೆ ಮಾಹಿತಿ ಬರೆಯುವುದು.

| | Criteria for Writing skills | Marks |
|---|---|---|
| 1 | ಅಕ್ಷರ ಶುದ್ಧತೆ | 1 |
| 2 | ವಾಕ್ಯ ರಚನಾಸಾಮರ್ಥ್ಯ | 1 |

| | | |
|---|---|---|
| 3 | ವಿಷಯ ಪ್ರಸ್ತುತಿ | 1 |
| 4 | ಶಬ್ದಕೋಶ | 1 |
| 5 | ವ್ಯಾಕರಣ ಶುದ್ಧತೆ | 1 |